ಅವರನ್ನೂ ಮನುಷ್ಯರಂತೆ ಕಾಣತೊಡಗಿದ್ದರು. ಆದರೆ ನಾನು ಹೇಳುತ್ತಿರುವುದೆಲ್ಲ ಈಗ ಅಪ್ರಸ್ತುತವೆಂದು ನಿಮಗನ್ನಿಸುತ್ತಿದ್ದರೆ ದಯವಿಟ್ಟು ಕ್ಷಮಿಸಿ. ಆಗಿನಷ್ಟಿಲ್ಲದಿದ್ದರೂ ಇಂದಿಗೂ ಇದೆಲ್ಲ ಇದೆ. ರೂಪ ಮತ್ತು ರೀತಿಯಲ್ಲಿ ಬದಲಾವಣೆ ಪಡೆದಿರಬಹುದಷ್ಟೇ!

ಹೀಗೆ ಆ ಕೊಂಪೆಯ ಜನರ ನಡುವೆ ಬದುಕಲ್ಲದ ಬದುಕಿನಲ್ಲಿ ಬದುಕುತ್ತಿದ್ದವನು 'ಹಾರಪ್ಪ'. ಅವನ ಹೆಂಡತಿ ಸತ್ತು ಹೋಗಿ ಹಲವು ವರ್ಷಗಳೇ ಉರುಳಿದ್ದವು. ಇದ್ದ ಮೂವರು ಮಕ್ಕಳಲ್ಲಿ ಬಾನಪ್ಪ ಹಿರಿಯವನು, ಅವನ ತಂಗಿ ರಂಗಮ್ಮ ಮತ್ತು ಕೊನೆಯವನು ತಮ್ಮ ಮುನಿಯಪ್ಪ. ಬಡತನವಲ್ಲದೆ ಸಮಾಜ ನೆಟ್ಟ ಹೊಲೆತನವಿದ್ದರೂ ಗುಡಿಸಲಲ್ಲಿ ಹರುಷಕ್ಕೇನೂ ಕೊರತೆಯಿರಲಿಲ್ಲ. ಹಾರಪ್ಪ ಒಂದಕ್ಷರವನ್ನೂ ಓದಿ ಬರೆಯಲು ಬಾರದವನು. ಆದರೆ ತಿಳಿವಳಿಕೆ ಹೆಚ್ಚೇ ಇತ್ತು. ಸಂವಿಧಾನ ತಮ್ಮವರಿಗೆ ಕೊಟ್ಟ ಹಕ್ಕುಗಳನ್ನಾದರೂ ತಿಳಿದು ಕೊಳ್ಳುವಷ್ಟು ನಾನು ಓದಿರಬೇಕಿತ್ತೆಂದು ಅವನಿಗೆ ಅರ್ಧ ವಯಸ್ಸು ಕಳೆದಮೇಲೆ ಅನ್ನಿಸಿತ್ತಂತೆ. ಅವನು ತನ್ನೂರಿನ ಜಾತಿ ತಾರತಮ್ಯಕ್ಕೆ ಸಿಕ್ಕು ರೋಸಿ ಹೋಗಿದ್ದ. ಹಾಗಾಗಿ ತನ್ನ ಕಿರಿಯ ಮಗನಾದರೂ ಓದಿ ಜಾಣನಾಗಲೆಂಬ ಹೆಬ್ಬಯಕೆಯೊಂದಿಗೆ ಮೇಷ್ಟ್ರೊಬ್ಬರ ಅಂಗಲಾಚಿ, ಇದ್ದ ಪುಡಿಗಾಸನ್ನೂ ಅವರಿಗೆ ಕೊಟ್ಟು, 'ಇನ್ಯಾಕೆ ಇವನ್ನ ನಿಮ್ಮಗ ಅನ್ಕೊಂಡು ಈ ಊರು ಬಿಟ್ಟು ಎಲ್ಲಾದ್ರೂ ಸೇರ್ಸಿ ಓದ್ಸಿ ಸಾಮಿ' ಎಂದು ಕೇಳಿಕೊಂಡಿದ್ದನು. ಆ ಮೇಷ್ಟ್ರು ಕೂಡ ತುಂಬಾ ಒಳ್ಳೆಯವರಿದ್ದರು. ಒಪ್ಪಿಕೊಂಡು, ಮೂರನೇ ಕ್ಲಾಸಿಗೇ ಒಂದೂರಿನ ವಸತಿ ಶಾಲೆಗೆ ಸೇರಿಸಿಬಿಟ್ಟರು. ಕೊಂಪೆಯ ವೈಭವವನ್ನುಂಡ ಆ ಹುಡುಗನೂ ಬಹುಬೇಗ ವಸತಿ ಶಾಲೆಗೆ ಹೊಂದಿಕೊಂಡನು. ಅವನನ್ನು ಹಾರಪ್ಪ ಎಂದೂ ಊರಿಗೆ ಕರೆದುಕೊಂಡು ಬರಲಿಲ್ಲ. ಆ ಹುಡುಗನೂ ಬರುತ್ತಿರಲಿಲ್ಲ. ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಇವರೇ ಒಬ್ಬರಾದ ಮೇಲೊಬ್ಬರಂತೆ ಹೋಗಿ ನೋಡಿಕೊಂಡು ಬಂದರಾಯ್ತು. ಅವನಿಗೂ ಅಷ್ಟೇ ಸಾಕಿತ್ತು.

ಇತ್ತ ಹಾರಪ್ಪ ಮತ್ತವನ ಹಿರಿ ಮಗ ಬಾನಪ್ಪ ದಿನಪೂರ್ತಿ ದುಡಿದು ದಣಿಯಲೇಬೇಕಿತ್ತು. ಈ ವಾತಾವರಣದಲ್ಲೇ ಹುಟ್ಟಿ ಬೆಳೆದು ಬದುಕುತ್ತಿರುವ ಹುಡುಗಿ ರಂಗಮ್ಮ. ವಯಸ್ಸು ಹದಿನಾರು-ಹದಿನೇಳಿರಬಹುದು. ತಾಯಿಯಿಲ್ಲದ ಮಗಳು. ಬದುಕಿನ ಇಡೀ ಕಷ್ಟ- ಕಾರ್ಪಣ್ಯಗಳನ್ನು ಅದಾಗಲೇ ಕಂಡಿದ್ದಳು. ತುಂಬು ಸೌಜನ್ಯವಿತ್ತು. ನೋಡಿದವರು ಇವಳನ್ನು ಹೊಲತಿಯೆಂದರೆ ನಂಬುತ್ತಿರಲಿಲ್ಲ. ಎಲ್ಲರೂ ಬೆರಗಾಗುವಷ್ಟು ರೂಪ, ಬಣ್ಣ, ಸೌಂದರ್ಯ ಅವಳಲ್ಲಿತ್ತು. ಈಗೀಗ ಊರಿನವರ ಕಣ್ಣುಗಳೆಲ್ಲ ಅವಳ ಮೇಲೆ ನೆಡುತ್ತಿದ್ದದ್ದು ಹಾರಪ್ಪನಿಗೆ ಆಘಾತ ಉಂಟು ಮಾಡಿತ್ತು. ಇದೊಂದು ವರ್ಷ ಕಳೆದಕೂಡಲೇ ಅವಳಿಗೊಂದು ಮದುವೆ ಮಾಡಿಸಬೇಕೆಂದು ಹಂಬಲಿಸುತ್ತಿದ್ದ. ತಂದೆ ಮತ್ತು ಅಣ್ಣರಿಬ್ಬರೂ ಅವಳನ್ನು ಕಣ್ಣುರೆಪ್ಪೆಯಂತೆ ನೋಡಿಕೊಂಡಿದ್ದರು. ಅವಳೂ ಅವರಿಗೆ ಮಗಳು-ತಂಗಿ ಅಷ್ಟೇ ಅಲ್ಲದೆ ತಾಯಿಯೂ ಆಗಿದ್ದಳು. ಗುಡಿಸಲಲ್ಲದೇ ಇಡೀ ಕೇರಿಗೆ ಅವಳೊಂದು ಕಳೆ ಎಂದು ನೋಡಿದವರು ಮಾತನಾಡಿಕೊಳ್ಳುತ್ತಿದ್ದರು. ರಂಗಮ್ಮ ಕಾಡು ಹೂವಿನಂಥ ಹುಡುಗಿ. ತೀರಾ ಅಪರೂಪದ ಹುಡುಗಿ. ಚಿಕ್ಕಂದಿನಿಂದಲೂ ತಾನೇ ತೋಟಕ್ಕೆ ಹೋಗಿ, ಹೂವು ಹರೆದು, ಚಂದನೆಯ ಮಾಲೆ ಮಾಡಿ ಪೇಟೆಗೆ ತಲುಪಿಸುತ್ತಿದ್ದಳು. ಅದರಿಂದ ಬಂದ ಹಣವನ್ನೆಲ್ಲಾ ತನ್ನ ತಮ್ಮ ಮುನಿಯಪ್ಪನ ಓದಿಗೆಂದೇ ಎತ್ತಿಡುತ್ತಿದ್ದಳು. ಅವನ ಮೇಲೆ ಅವಳಿಗೆ ಎಲ್ಲಿಲ್ಲದ ಪ್ರೀತಿ. ಅವನಿಗೂ ಅಷ್ಟೇ. ಮೂರ್ನಾಲ್ಕು ತಿಂಗಳಿಗೊಮ್ಮೆಯಾದರೂ ತಮ್ಮನನ್ನು ನೋಡಲು ಹಟ ಹಿಡಿದು ಅಪ್ಪನೊಡನೆ ಹೋಗಿಬಿಡುತ್ತಿದ್ದಳು. ತಾನು ಎತ್ತಿಟ್ಟ ಹಣವನ್ನು ಕೊಟ್ಟು, ಕೈಯ್ಯಾರೆ ಮಾಡಿದ ತಿನಿಸುಗಳನ್ನು ತಾನೇ ತಿನ್ನಿಸಿ, ನಾಲ್ಕು ಚಂದದ ಮಾತನಾಡುತ್ತಿದ್ದಳು. ಅದು ಅವಳ ಪಾಲಿನ ಅಮೃತ ಘಳಿಗೆ. ಕಣ್ಣಲ್ಲಿನ ನೀರೆಲ್ಲವನ್ನೂ ಕೆಳಕ್ಕೆ ಕೆಡವಿ ಅದೇ ಕಣ್ಣಲ್ಲಿ ತಮ್ಮನನ್ನು ತುಂಬಿಕೊಳ್ಳುತ್ತಿದ್ದಳು. ಅಲ್ಲಿಂದ ಮರಳಿ ಬಂದು ಮತ್ತೆ ಅದೇ ಸಂದರ್ಭವನ್ನು ನೆನೆಯುತ್ತಲೇ ಹೇಗೋ ನಾಲ್ಕು ತಿಂಗಳು ಕಳೆದು ಬಿಡುತ್ತಿದ್ದಳು.

* * *

ಎಲ್ಲ ದಿನದಂತೆಯೇ ಹೀಗೊಂದು ದಿನ.